<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಎಂಎಫ್‌ಸಿ, ಕುಂದಾಪುರ</u>

ಓ.ಎಸ್. ನಂಬ್ರ:214-10
ಪಿ.ಡಬ್ಲ್ಯೂ: 3

ದಿನಾಂಕ: 14-09-2017

ಪ್ರಮಾಣವಚನ ಮಾಡಿಸಲಾಗಿದೆ

ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎಂ.ಜೆ.ಎಸ್. ವಕೀಲರಿಂದ

ನಾನು ನನ್ನ ಪ್ರಮಾಣಪತ್ರವನ್ನು ಈ ದಿವಸ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನನ್ನ ಮುಖ್ಯವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿರುವ ಕರಾರು ಪತ್ರ ನಿಪಿ:6 ಆಗಿರುತ್ತದೆ. ಆದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ:6ಎನ್ ಎಂದು ಗುರುತಿಸಲಾಗಿದೆ. ನಿಪಿ:6 ರಲ್ಲಿ ಸಹಿ ಮಾಡಿರುವ ಸಾವಿತ್ರಮ್ಮ ಮತ್ತು ಟಿ.ಆರ್.ವೆಂಕಟರಮಣ ಹತ್ವಾರ್ ರವರ ಸಹಿವುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯೂ ನಿಪಿ:6ರ ಪ್ರತಿ ಪುಟದಲ್ಲಿ ಇರುವ ಅವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ:6ಇ ಯಿಂದ ನಿಪಿ:6ಹೆಚ್ ಎಂದು ಮತ್ತು ನಿಪಿ:6ಐ ಯಿಂದ ನಿಪಿ:6ಎಲ್ ಎಂದು ಗುರುತಿಸಲಾಗಿದೆ. ಸಾಕ್ಷಿಯೂ ನಿಪಿ:6 ರ ಪ್ರತಿಪುಟಗಳಲ್ಲಿರುವ ನಾಗರಾಜ್ ಭಟ್ ರವರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ:6ಎ ಯಿಂದ ನಿಪಿ:6ಡಿ ಎಂದು ಗುರುತಿಸಲಾಗಿದೆ. ನಿಪಿ:6 ದಾಖಲೆಗೆ ನರಸಿಂಹ ದೇವಾಡಿಗ ಎಂಬುವವರು ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದ್ರಿಯವರ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ:6ಎಮ್ ಎಂದು ಗುರುತಿಸಲಾಗಿದೆ. ಸದ್ರಿ ದಾಖಲೆಯನ್ನು ವೆಂಕಟರಮಣಯ್ಯ ಎಂಬ ಬರಹಗಾರರು ಬರೆದು ಸಹಿಯನ್ನು ಮಾಡಿರುತ್ತಾರೆ. ಅವರ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ:6ಒ ಎಂದು ಗುರುತಿಸಿದೆ.

(ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಲಾಯಿತು, ಸಮಯಾವಕಾಶ ನೀಡಲಾಗಿದೆ)

ಓ. ಹೇ. ಕೇ. ಸರಿ ಇದೆ. ನನ್ನ. ಹೇ . ಮೇ. ಬೆ. ಮಾಡಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕುಂದಾಪುರ